# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು-572 103

ಸಂಖ್ಯೆ: ತುವಿ: ಡಿಇವಿ-02:2025-26/ 410 ದಿನಾಂಕ:12.05.2025

**:ಸುತ್ತೋಲೆ:**

ವಿಷಯ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ವತಿಯಿಂದ ಹೊರತರುತ್ತಿರುವ ಮಾಸಿಕ ನಿಯತಕಾಲಿಕೆಗೆ ತುಮಕೂರು ವಿಶ್ವವಿದ್ಯಾನಿಲಯದಿಂದ ಮಾಹಿತಿಯನ್ನು ಸಲ್ಲಿಸುವ ಕುರಿತು.

ಉಲ್ಲೇಖ: 1. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಇವರ ಪತ್ರ ಸಂಖ್ಯೆ:ಕರಾಉಶಿಪ/Magazine/2024-25/271 ದಿನಾಂಕ:15.04.2025

2. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:09.05.2025

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ವತಿಯಿಂದ ಮಾಸಿಕ ನಿಯತ ಕಾಲಿಕೆ (ಕನ್ನಡ ಮತ್ತು ಆಂಗ್ಲ) ಏಪ್ರಿಲ್ ಮಾಹೆಯಿಂದ ಹೊರತರಲಾಗುತ್ತಿದೆ. ಕರ್ನಾಟಕ ಉನ್ನತ ಶಿಕ್ಷಣ ಇಲಾಖೆ ಹಾಗೂ ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾನಿಲಯಗಳ ಮಾಹಿತಿ ಆಧಾರಿತವಾಗಿದ್ದು, ಸಂಶೋಧನಾ ಚಟುವಟಿಕೆಗಳನ್ನು ಉತ್ತೇಜಿಸುವ ಹಾಗೂ ಪ್ರತಿ ವಿಶ್ವವಿದ್ಯಾಲಯಗಳ ಸಮಗ್ರ ಮಾಹಿತಿ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಲಭ್ಯವಾಗುವ ಆಶಯದೊಂದಿಗೆ ಮಾಸಿಕ ನಿಯಕಾಲಿಕೆಯನ್ನು ಹೊರತರಲಾಗುತ್ತಿದೆ. ಆದ್ದರಿಂದ ಪ್ರತಿ ತಿಂಗಳ ವಿಶ್ವವಿದ್ಯಾಲಯಗಳು ಆಯೋಜಿಸುವ ಹಾಗೂ ನಡೆಸುವ ವಿಶೇಷ ಕಾರ್ಯಕ್ರಮಗಳು, ಕಾರ್ಯ ಚಟುವಟಿಕೆಗಳ ಮಾಹಿತಿ ಮತ್ತು ವಿಶೇಷ ಸಂಶೋಧನಾ ಲೇಖನಗಳನ್ನು ಕಾರ್ಯ ಚಟುವಟಿಕೆಗಳ ಮಾಹಿತಿ ಮತ್ತು ವಿಶೇಷ ಸಂಶೋಧನಾ ಲೇಖನಗಳನ್ನು ಸಲ್ಲಿಸುವಂತೆ ತಿಳಿಸಿರುತ್ತಾರೆ.

ಈ ಸಂಬಂಧ ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಾಪಕರುಗಳು ತಮ್ಮ ವಿಶೇಷ ಸಂಶೋಧನಾ ಲೇಖನಗಳನ್ನು ಕಡ್ಡಾಯವಾಗಿ ಪ್ರತಿ ಮಾಹೆಯಾನ ವಿಶ್ವವಿದ್ಯಾನಿಲಯದ IRNS Tumkur University Portal ನಲ್ಲಿ ವಿದ್ವಾನ್ ಐಡಿ ಮುಖೇನ ಅಪ್ಡೇಟ್ ಮಾಡುವಂತೆ ಹಾಗೂ ಪ್ರತಿ ತಿಂಗಳು ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸುವ ಹಾಗೂ ನಡೆಸುವ ವಿಶೇಷ ಕಾರ್ಯಕ್ರಮಗಳು ಮತ್ತು ಕಾರ್ಯಚಟುವಟಿಕೆಗಳ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತಕ್ರಮವಹಿಸುವಂತೆ ಈ ಮೂಲಕ ತಿಳಿಸಲಾಗಿದೆ.

ಆದೇಶದ ಮೇರೆಗೆ

ಉಪಕುಲಸಚಿವರು
ಅಭಿವೃದ್ಧಿ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

1. ಅಧ್ಯಕ್ಷರು/ಸಂಯೋಜಕರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.
2. ಅಧ್ಯಕ್ಷರು/ಸಂಯೋಜಕರು ಸ್ನಾತಕೋತ್ತರ ವಿಜ್ಞಾನ ವಿಭಾಗಗಳು,"ಜ್ಞಾನಸಿರಿ ಕ್ಯಾಂಪಸ್" ಬಿದರಕಟ್ಟೆ, ಹೆಬ್ಬೂರು ಹೋಬಳಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಘಟಕ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ನಿರ್ದೇಶಕರು, ಸಂಶೋಧನೆ-ಪಿಹೆಚ್‌ಡಿ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಸಂಯೋಜಕರು, "ಜ್ಞಾನಸಿರಿ ಕ್ಯಾಂಪಸ್" ಬಿದರಕಟ್ಟೆ, ಹೆಬ್ಬೂರು ಹೋಬಳಿ, ತುಮಕೂರು.
6. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಮತ್ತು ಮುಖ್ಯಸ್ಥರು, ಸ್ನಾತಕೋತ್ತರ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
7. ಗ್ರಂಥಪಾಲಕರು, ವಿಶ್ವವಿದ್ಯಾನಿಲಯ ಗ್ರಂಥಾಲಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು- IRNS Tumkur University Portal ನ ಮಾಹಿತಿ ಅಪ್ಡೇಟ್ ಮತ್ತು ನಿರ್ವಹಣೆಗೆ ಕ್ರಮವಹಿಸಲು.
8. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು-ವೆಬ್‌ಸೈಟ್‌ನಲ್ಲಿ ಮಾಹಿತಿ ಅಪ್ಡೇಟ್ ಮತ್ತು ನಿರ್ವಹಣೆಗೆ ಕ್ರಮವಹಿಸಲು.

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಕಚೇರಿ ಪ್ರತಿ.